ನೌಕರರು ಅವ್ಯವಹಾರಗಳಲ್ಲಿ ತೊಡಗಿರತಕ್ಕಂತಹ ಪ್ರಕರಣಗಳಲ್ಲಿ ಅಂಧವರ ಮೇಲೆ ನಡತೆ ಮತ್ತು ಶಿಸ್ತು ನಿಯಮಾವಳಿ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

೧) ಸಿಬ್ಬಂದಿಯ ಕಾರ್ಯವ್ಯವಸ್ಥೆ ಉತ್ತಮಪಡಿಸುವುದು.
೨) ಮಾರ್ಗ ತನಿಖೆ ಹೆಚ್ಚಿಸುವುದು.
೩) ವಾಹನದ ಉತ್ತಮ ಬಳಕೆ.
೪) ಇಂಧನ ಮತ್ತು ಟೈರುಗಳ ಬೆಲೆ ಇಳಿಸಲು ಒಂದು ಸೂತ್ರವನ್ನು ಸಿದ್ಧಪಡಿಸುವುದು ಮತ್ತು ಪಾಲಿಸುವುದು.
೫) ಬಸ್ ಸಿಬ್ಬಂದಿಯ ಪ್ರಯಾಣ ಇಳಿಸುವುದು.

ವಿಷಯ:- ಬಯಲುನಾಡು ಅಭಿವೃದ್ಧಿ ಮಂಡಲಿ ರಚನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೨:- (೧೬)
ಶ್ರೀ ಎ.ವಿ. ಉಮಾಪತಿ (ಹೊಳಲ್‌ಕೆರೆ)
ಮಾನ್ಯ ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಮಲೆನಾಡು ಅಭಿವೃದ್ಧಿ ಮಂಡಳಿ ಮತ್ತು ಹೈದರಾಬಾದ್ ಅಭಿವೃದ್ಧಿ ಮಂಡಳಿ ರಚಿಸಿ ಆ ಪ್ರದೇಶಗಳನ್ನು ಅಭಿವೃದ್ಧಿಪಡಿಸುತ್ತಿದ್ದು, ದೇಶದ ಬಯಲು ನಾಡುಗಳನ್ನು ನಿರ್ಲಕ್ಷಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?
ಆ) ಬಯಲು ನಾಡುಗಳಾದ ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಬಗ್ಗೆ ಮಲತಾಯಿ ಧೋರಣೆ ಅನುಸರಿಸುತ್ತಿರುವುದರಿಂದ ಆ ಜಿಲ್ಲೆಗಳ ಅಭಿವೃದ್ಧಿಯು ಕುಂಠಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?
ಇ) ಆದ್ದರಿಂದ ಈಗಲಾದರೂ ಸರ್ಕಾರವು ಸದರಿ ಜಿಲ್ಲೆಗಳನ್ನು ಸೇರಿಸಿ ಬಯಲು ನಾಡು ಅಭಿವೃದ್ಧಿ ಮಂಡಳಿಗಳನ್ನು ರಚಿಸಿ ಬಯಲು ಸೀಮೆಗಳ ಅಭಿವೃದ್ಧಿಗೆ ಗಮನಹರಿಸುವುದೇ?

ಶ್ರೀ ಟಿ.ಎಂ. ಮಂಜುನಾಥ್
(ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ರಾಜ್ಯ ಮಂತ್ರಿಗಳು)

ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಗುಲ್ಬರ್ಗಾ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ, ಶಿವಮೊಗ್ಗ ಇವುಗಳು ಅಸ್ತಿತ್ವಕ್ಕೆ ಬಂದಿವೆ. ಯಾವುದೇ ಹೆಚ್ಚಿನ ಪ್ರದೇಶಾಭಿವೃದ್ಧಿ ಮಂಡಳಿಗಳ ರಚನೆಯ ಬಗ್ಗೆ ವಿಚಾರಿಸುವುದಕ್ಕಿಂತ ಮೊದಲು ಈಗಾಗಲೇ ಸ್ಥಾಪಿತವಾಗಿರುವ ಪ್ರದೇಶಾಭಿವೃದ್ಧಿ ಮಂಡಳಿಗಳ ಕಾರ್ಯವೈಖರಿಯನ್ನು ವೀಕ್ಷಿಸುವುದು ಸೂಕ್ತ.

ವಿಷಯ:- ಮಲೆನಾಡು ಅಭಿವೃದ್ಧಿ ಯೋಜನೆಯಡಿಯಲ್ಲಿ ಒದಗಿಸಿರುವ ಹಣ.

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ ೩:- (೬೬)
ಶ್ರೀ ಬಿ. ಶಿವರಾಮು (ಗಂಡಸಿ)
ಪರಿಸರ ಮತ್ತು ಜೀವ ಪರಿಸರಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಾನ್ಯ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಸೇರಿರುವ ಒಟ್ಟು ತಾಲ್ಲೂಕುಗಳೆಷ್ಟು?
ಆ) ೧೯೯೩-೯೪ನೇ ಸಾಲಿನ, ಆಯವ್ಯಯದಲ್ಲಿ ಅದಕ್ಕಾಗಿ ಒದಗಿಸಿರುವ ಹಣವೆಷ್ಟು?
ಇ) ಈ ಅಭಿವೃದ್ಧಿಯಡಿಯಲ್ಲಿ ಅಳವಡಿಸಲಾಗಿರುವ ಯೋಜನೆಗಳೇನು?
ಈ) ೧೯೯೨-೯೩ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ಯಾವುದಾದರೂ ಜಿಲ್ಲೆಯ ಅಭಿವೃದ್ಧಿ ಹಣ ಬಿಡುಗಡೆಯಾಗಿದೆಯೇ?
ಉ) ೧೯೯೨-೯೩ನೇ ಸಾಲಿನಲ್ಲಿ ಯಾವುದಾದರೂ ಜಿಲ್ಲೆಯ ಯೋಜನೆಯ ಕರಡನ್ನು ಮಂಜೂರು ಮಾಡಲಾಗಿದೆಯೇ?
ಊ) ಹಾಸನ ಜಿಲ್ಲೆಗೆ ೧೯೯೩-೯೪ನೇ ಸಾಲಿನಲ್ಲಿ ಒದಗಿಸಿರುವ ಹಣವೆಷ್ಟು? ಹಾಗೂ ಆ ಯೋಜನೆಯ ಅಂದಾಜು ಕರಡು ಮಂಜೂರಾಗಿದೆಯೇ?

ಶ್ರೀ (ಎನ್.ಜಿ. ಹಾಲಪ್ಪ)
(ಪರಿಸರ ಮತ್ತು ಜೀವಿ ಪರಿಸರಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಮಂತ್ರಿಗಳು)

೫೮

ವಿಧಾನ ಮಂಡಲದಲ್ಲಿ ೧೯೯೩-೯೪ನೇ ಸಾಲಿನ ಆಯವ್ಯಯದ ಒಪ್ಪಿಗೆ ಪಡೆದ ನಂತರ ತಿಳಿಯುವುದು.

ಮಂಡಳಿಯು ರಚನೆಯಾಗಲಿದೆ. ಮಂಡಳಿಯು ಕಾರ್ಯಕ್ರಮಗಳ ಪಟ್ಟಿಯನ್ನು ತಯಾರಿಸುವುದು.

ಇಲ್ಲ.

ಇಲ್ಲ.

ವಿಧಾನ ಮಂಡಲದಲ್ಲಿ ೧೯೯೩-೯೪ನೇ ಸಾಲಿನ ಆಯವ್ಯಯದ ಒಪ್ಪಿಗೆ ಪಡೆದ ನಂತರ ತಿಳಿಯುವುದು.

ವಿಷಯ:- ರಾಜ್ಯದಲ್ಲಿ ವಾಣಿಜ್ಯ ತೆರಿಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೪:- (೮೯)
ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)
ಮಾನ್ಯ ಮುಖ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೯೧-೯೨, ೧೯೯೨-೯೩ರಲ್ಲಿ ವಾಣಿಜ್ಯ ತೆರಿಗೆ ಬಾಕಿ ಕಟ್ಟಬೇಕಾದ ಅನೇಕ ಕೈಗಾರಿಕೋದ್ಯಮಗಳು ಹಾಗೂ ಗಣ್ಯರ ತೆರಿಗೆ ಬಾಕಿಯನ್ನು ಮನ್ನಾ ಮಾಡಿರುವುದು ನಿಜವೆ?
ಆ) ಹಾಗಿದ್ದರೆ, ಅಂತಹ ವ್ಯಕ್ತಿಗಳ-ಕೈಗಾರಿಕೋದ್ಯಮಿಗಳ ವಿವರಗಳನ್ನು ಒದಗಿಸುವುದು ಮತ್ತು ಮನ್ನಾ ಮಾಡಿರುವ ಮೊತ್ತವೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯ ಮಂತ್ರಿಗಳು)

ಕೆಲವು ಕೈಗಾರಿಕೆಗಳ ಮತ್ತು ವ್ಯಾಪಾರಸ್ಥರ ತೆರಿಗೆ ಬಾಕಿಯನ್ನು ವಸೂಲಿ ಕಾರ್ಯವಿಧಾನ ಜಾರಿ ಮಾಡಿದ್ದಾಗ್ಯೂ ವಸೂಲಿ ಸಾಧ್ಯವಿಲ್ಲದಿದ್ದುರಿಂದ ಮನ್ನಾ ಮಾಡಲಾಗಿದೆ.

ಪಟ್ಟಿ ಲಗತ್ತಿಸಿದೆ.